# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1278 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ. ವಿವೇಕಾನಂದ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 13.03.2026 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ಮೈಸೂರು, ಮಂಡ್ಯ, ಹಾಸನ ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ನಡೆಯುತ್ತಿರುವ ವಿವಿಧ ಎಲ್ಲಾ ವರ್ಗದ ವಸತಿ ನಿಲಯಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರವಾದ ಮಾಹಿತಿ ನೀಡುವುದು); | ಮೈಸೂರು ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 41 ಮೆಟ್ರಿಕ್ ಪೂರ್ವ ಹಾಗೂ 67 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹಾಗೂ ಮಂಡ್ಯ ಜಿಲ್ಲೆಯಲ್ಲಿ 62 ಮೆಟ್ರಿಕ್ ಪೂರ್ವ ಹಾಗೂ 54 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹಾಗೂ ಹಾಸನ ಜಿಲ್ಲೆಯಲ್ಲಿ 62 ಮೆಟ್ರಿಕ್ ಪೂರ್ವ ಹಾಗೂ 60 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ 12 ಮೆಟ್ರಿಕ್ ಪೂರ್ವ ಹಾಗೂ 22 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ. ಸದರಿ ಜಿಲ್ಲೆಗಳಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸ್ವಂತ, ಬಾಡಿಗೆ ಹಾಗೂ ಉಚಿತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳ ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | ಮೈಸೂರು, ಮಂಡ್ಯ, ಹಾಸನ ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಈ ಇಲಾಖೆಗಳಿಂದ ನಡೆಯುತ್ತಿರುವ ಎಲ್ಲಾ ವಸತಿ ನಿಲಯಗಳು ಸ್ವಂತ ಕಟ್ಟಡದಲ್ಲಿ ನಡೆಯುತ್ತಿವೆಯೇ; ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ವಸತಿ ನಿಲಯಗಳ ಸಂಖ್ಯೆ ಎಷ್ಟು;(ತಾಲ್ಲೂಕುವಾರು ವಿವರವಾದ ಮಾಹಿತಿ ನೀಡುವುದು) | |
| ಇ) | ಈ ನಾಲ್ಕೂ ಜಿಲ್ಲೆಗಳಲ್ಲಿನ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ವಸತಿ ನಿಲಯಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇರುವುದರಿಂದ, ಸರ್ಕಾರ ಸ್ವಂತ ಕಟ್ಟಡಗಳನ್ನು ನಿರ್ಮಾಣ ಮಾಡಲು ವಿಶೇಷ ಅನುದಾನವನ್ನು ನೀಡಲು ಯಾವ ಕ್ರಮವನ್ನು ಕೈಗೊಂಡಿದೆ? | ಮೈಸೂರು, ಮಂಡ್ಯ, ಹಾಸನ ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಕ್ರಮವಾಗಿ 43, 41, 21 ಹಾಗೂ 4 ಹೀಗೆ ಒಟ್ಟು 109 ವಿದ್ಯಾರ್ಥಿನಿಲಯಗಳನ್ನು ಮಂಜೂರಾತಿ ಸಂಖ್ಯೆಗನುಗುಣವಾಗಿ ಅಗತ್ಯ ಮೂಲಭೂತ ಸೌಕರ್ಯ ಮತ್ತು ಸ್ಥಳಾವಕಾಶ ಲಭ್ಯವಿರುವ ಸೂಕ್ತ ಬಾಡಿಗೆ ಕಟ್ಟಡಗಳನ್ನು ಪಡೆದು ನಿರ್ವಹಿಸಲಾಗುತ್ತಿದೆ. ಮುಂದುವರೆದು, ಆಯಾ ಆರ್ಥಿಕ ವರ್ಷದಲ್ಲಿ ಒದಗಿಸಲಾಗುವ ಅನುದಾನದ ಲಭ್ಯತೆಯನುಸಾರ ಮಂಜೂರಾತಿ ಸಂಖ್ಯೆಗನುಗುಣವಾಗಿ ಬೇಡಿಕೆಯನುಸಾರ ಹೆಚ್ಚಿನ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕ್ರಮವಹಿಸಲಾಗುತ್ತಿದೆ.<br><br>ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡಗಳ ನಿರ್ಮಾಣವನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹಾಸ್ಟೆಲ್ ಕಟ್ಟಡಗಳ ನಿರ್ಮಾಣ ಕಾರ್ಯಕ್ರಮದಡಿ ಒದಗಿಸಲಾಗುವ ಅನುದಾನದ ಲಭ್ಯತೆಗನುಗುಣವಾಗಿ ಕೈಗೊಳ್ಳಲಾಗುತ್ತಿದೆ. |

ಈ ನಾಲ್ಕು ಜಿಲ್ಲೆಗಳಲ್ಲಿ 2024-25 ಮತ್ತು 2025-26ನೇ ಸಾಲಿನಲ್ಲಿ 07 ವಿದ್ಯಾರ್ಥಿನಿಲಯ ಕಟ್ಟಡಗಳ ನಿರ್ಮಾಣವನ್ನು ಕೈಗೊಳ್ಳಲಾಗಿದ್ದು, ಕಾಮಗಾರಿಗಳ ವಿವರಗಳು ಕೆಳಕಂಡಂತಿವೆ.

| ಕ್ರ. ಸಂ | ವರ್ಷ & ಯೋಜನೆ | ಜಿಲ್ಲೆ | ತಾಲ್ಲೂಕು | ವಿದ್ಯಾರ್ಥಿನಿಲಯದ ಹೆಸರು | ನಿರ್ಮಾಣ ಏಜೆನ್ಸಿ | ಅಂದಾಜು ಮೊತ್ತ (ರೂ.ಕೋಟಿ ಗಳಲ್ಲಿ) |
|---|---|---|---|---|---|---|
| 1. | 2024-25 ಆಯವ್ಯಯ ಘೋಷಣೆ | ಮೈಸೂರು | ಮೈಸೂರು | ಶ್ರೀಮತಿ ಇಂದಿರಾಗಾಂಧಿ ನರ್ಸಿಂಗ್ ಬಾಲಕಿಯರ ವಿದ್ಯಾರ್ಥಿನಿಲಯ, ಮೈಸೂರು | ಕೆ.ಹೆಚ್.ಬಿ | 4.00 |
| 2. | 2024-25 ಆಯವ್ಯಯ ಘೋಷಣೆ | ಮೈಸೂರು | ಮೈಸೂರು | ಮೆಟ್ರಿಕ್ ನಂತರ ಸ್ನಾತಕೋತ್ತರ ಬಾಲಕಿಯರ ವಿದ್ಯಾರ್ಥಿನಿಲಯ, ಮೈಸೂರು ವಿಶ್ವವಿದ್ಯಾಲಯ, ಆವರಣ, ಮೈಸೂರು | ಕೆ.ಹೆಚ್.ಬಿ | 4.00 |
| 3. | 2024-25 ಆಯವ್ಯಯ ಘೋಷಣೆ | ಮಂಡ್ಯ | ಮದ್ದೂರು | ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ, ಕೆ.ಎಂ ದೊಡ್ಡಿ | ಕೆ.ಹೆಚ್.ಬಿ | 4.00 |
| 4. | 2024-25 ಆಯವ್ಯಯ ಘೋಷಣೆ | ಮಂಡ್ಯ | ಮದ್ದೂರು | ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಮದ್ದೂರು ಟೌನ್ ಘಟಕ-2 | ಕೆ.ಹೆಚ್.ಬಿ | 5.00 |
| 5. | 2024-25 ಆಯವ್ಯಯ ಘೋಷಣೆ | ಹಾಸನ | ಹಾಸನ | ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿನಿಲಯ, ಅರಸೀಕರೆ ಟೌನ್ | ಕೆ.ಹೆಚ್.ಬಿ | 4.00 |
| 6. | 2025-26 ಆಯವ್ಯಯ ಘೋಷಣೆ | ಮೈಸೂರು | ಪಿರಿಯಾಪಟ್ಟಣ | ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿನಿಲಯ, ಪಿರಿಯಾಪಟ್ಟಣ | PWD-PRAMC | 5.00 |
| 7. | 2025-26 ಆಯವ್ಯಯ ಘೋಷಣೆ | ಮಂಡ್ಯ | ನಾಗಮಂಗಲ | ಮೆಟ್ರಿಕ್ ನಂತರದ ವೈದ್ಯಕೀಯ & ಇಂಜಿನಿಯರಿಂಗ್ ಬಾಲಕಿಯರ ವಿದ್ಯಾರ್ಥಿ ನಿಲಯ, ಗೋವಿಂದಘಟ್ಟ | PWD-PRAMC | 5.00 |
| 8. | ಚಾಮರಾಜ ನಗರ | ಯಾವುದೇ ಹೊಸ ಕಟ್ಟಡ ನಿರ್ಮಾಣವನ್ನು ಕೈಗೊಂಡಿರುವುದಿಲ್ಲ. | | | | |

ಸಂಖ್ಯೆ:ಹಿಂವಕ **206** ಬಿಎಂಎಸ್ **2026**

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

**ಮಾನ್ಯ ವಿಧಾನಸ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ವಿವೇಕಾನಂದ ಇವರ ಚುಕ್ಕೆರಹಿತ ಪ್ರಶ್ನೆ ಸಂಖ್ಯೆ:1278ಕ್ಕೆ ಅನುಬಂಧ**

| ಕ್ರ.ಸಂ | ಜಿಲ್ಲೆ | ತಾಲ್ಲೂಕು | ಒಟ್ಟು ವಿದ್ಯಾರ್ಥಿನಿಲಯಗಳು | ಒಟ್ಟು ಮಂಜೂರಾತಿ ಸಂಖ್ಯೆ | ಸ್ವಂತ | ಬಾಡಿಗೆ | ಉಚಿತ |
|---|---|---|---|---|---|---|---|
| 1. | ಮೈಸೂರು | ಹೆಚ್.ಡಿ ಕೋಟೆ | 8 | 535 | 4 | 4 | - |
| | | ಹುಣಸೂರು | 9 | 629 | 8 | 1 | - |
| | | ಕೆ.ಆರ್ ನಗರ | 13 | 1130 | 11 | 2 | - |
| | | ಮೈಸೂರು | 48 | 6088 | 21 | 26 | 1 |
| | | ನಂಜನಗೂಡು | 12 | 916 | 9 | 3 | - |
| | | ಪಿರಿಯಾಪಟ್ಟಣ | 10 | 660 | 6 | 3 | 1 |
| | | ಟಿ.ನರಸೀಪುರ | 8 | 762 | 4 | 4 | - |
| | | **ಒಟ್ಟು** | **108** | **10720** | **63** | **43** | **2** |
| 2. | ಮಂಡ್ಯ | ಕೆ.ಆರ್ ಪೇಟೆ | 15 | 1562 | 7 | 6 | 2 |
| | | ಮದ್ದೂರು | 24 | 2075 | 15 | 8 | 1 |
| | | ಮಳವಳ್ಳಿ | 13 | 850 | 7 | 5 | 1 |
| | | ಮಂಡ್ಯ | 26 | 2511 | 21 | 5 | - |
| | | ನಾಗಮಂಗಲ | 21 | 1975 | 10 | 11 | - |
| | | ಪಾಂಡವಪುರ | 9 | 803 | 6 | 3 | - |
| | | ಶ್ರೀರಂಗಪಟ್ಟಣ | 8 | 435 | 5 | 3 | - |
| | | **ಒಟ್ಟು** | **116** | **10211** | **71** | **41** | **4** |
| 3. | ಹಾಸನ | ಆಲೂರು | 3 | 235 | 1 | 2 | - |
| | | ಅರಕಲಗೂಡು | 10 | 695 | 7 | 3 | - |
| | | ಅರಸೀಕೆರೆ | 14 | 1084 | 12 | 2 | - |
| | | ಬೇಲೂರು | 5 | 470 | 2 | 2 | 1 |
| | | ಚನ್ನರಾಯಪಟ್ಟಣ | 22 | 1878 | 19 | 1 | 2 |
| | | ಹಾಸನ | 35 | 3606 | 20 | 7 | 8 |
| | | ಹೊಳೆನರಸೀಪುರ | 26 | 2655 | 21 | 1 | 4 |
| | | ಸಕಲೇಶಪುರ | 7 | 598 | 3 | 3 | 1 |
| | | **ಒಟ್ಟು** | **122** | **11221** | **85** | **21** | **16** |

| | | | | | | | |
|---|---|---|---|---|---|---|---|
| 4. | ಚಾಮರಾಜನಗರ | ಚಾಮರಾಜನಗರ | 19 | 1848 | 14 | 1 | 4 |
| | | ಗುಂಡ್ಲುಪೇಟೆ | 4 | 360 | 4 | - | - |
| | | ಕೊಳ್ಳೇಗಾಲ | 8 | 665 | 5 | 2 | 1 |
| | | ಯಳಂದೂರು | 3 | 185 | 2 | 1 | - |
| | | **ಒಟ್ಟು** | **34** | **3058** | **25** | **4** | **5** |

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು